ಏನೋ ಮೈಮರೆಸುವ ಸೆಳೆತ. ಕೈಮೇಲಿನಿಂದ ಇರುವೆ ಹರಿದಂತೆ ಕಚಗುಳಿಯಿಡುತ್ತಾ ತನ್ನ ಕೈ ಹರಿಯಬೇಕಿತ್ತು ಎನಿಸಿತು. ಸೋಮಾರಿಕಟ್ಟೆಯ ಗೆಳೆಯರ ದೃಷ್ಟಿಯಲ್ಲಿ ತಾನೊಬ್ಬ ಷಂಡ. ಯಜಮಾನಿ ಕೂಡಾ ತನ್ನನ್ನು ಹಾಗೆಂದೇ ತಿಳಿದಿರಬಹುದೋ ಏನೋ. ಅಮ್ಮಾವ್ರು ನಿಜವಾಗಿಯೂ ಟವೆಲ್ ಮರೆತಿರಬಹುದೇ? ಅಥವಾ ಟವೆಲನ್ನು ಒಳಕ್ಕೆಳೆದುಕೊಂಡ ಆಕೆಯನ್ನು ಮುಚ್ಚುತ್ತಿದ್ದ ಬಾಗಿಲಿನ ಕಿಂಚಿತ್ ಸೆರೆಯಿಂದ ನೋಡುತ್ತ ದೀಪೂ ಆವೇಶಗೊಂಡ. ಶೀಲಾ ಆತನನ್ನು ಗಮನಿಸುತ್ತಿದ್ದಂತೆಯೇ ದಢಾರನೆ ಬಾಗಿಲು ತೆರೆದುಕೊಂಡಿತು. ದೀಪೂ ಆಕೆಯನ್ನು ಬಲವಾಗಿ ತಬ್ಬಿದ. ಶೀಲಾಳಿಗೆ ಒಮ್ಮೆಲೆ ಮೈಯಿಡೀ ಉರಿದುಹೋಯಿತು. ಲಟಾರನೆ ದೀಪೂನ ಕೆನ್ನೆಗೆ ಒಂದೇಟು ಬಾರಿಸಿದಳು. ಒಂದು ಕ್ಷಣ ದೀಪೂ ತಬ್ಬಿಬ್ಬಾದ. ಏನಾಗಿಹೋಯಿತು? ಎಂಬ ಅರಿವು ಮೂಡಬೇಕಿದ್ದರೆ ದೀಪೂ ಹೊರಗೋಡೆಗೆ ಮುಖ ಹಾಕಿ ಕುಸಿದಿದ್ದ. ಆಕೆ ಏನೂ ಮಾತಾಡದೆ ಎದೆ ಮೇಲೆ ಟವೆಲನ್ನು ಬಿಗಿಗೊಳಿಸಿ, ಡ್ರೆಸ್ಸಿಂಗ್ ರೂಮಿನ ಕಡೆ ನಡೆದಳು.

ಹೊತ್ತು ಕಳೆಯಿತು. ಮನೆಯ ಸದ್ದು ಅಡಗಿಹೋಗಿತ್ತು. 'ದೀಪೂ, ಬಾರೋ ತಿಂಡಿ ತಿನ್ನು' ಅಡುಗೆ ಮನೆಯಿಂದ ಶೀಲಾ ಕರೆದಳು.

ದೀಪೂ ಬರಲಿಲ್ಲ. 'ದೀಪೂ, ಹೇಳಿದ್ದು ಕೇಳಿಸ್ತಾ?' ದೀಪೂ ಬಂದ, ತಿಂಡಿ ಮೆಚ್ಚಲಿಲ್ಲ. ತಿಂದ ಹಾಗೆ ಮಾಡಿದ, ಹೊತ್ತು ಕಳೆಯಿತು. ಆ ಕ್ಷಣದಲ್ಲಿ ಅಲ್ಲಿಂದೆದ್ದು ಹೊರನಡೆಯಬೇಕೆಂದು ದೀಪೂವಿಗೆ ಅನ್ನಿಸಿತು.

'ಮಾರ್ಕೆಟಿಗೆ ಹೋಗ್ಬೇಕು. ಮೀನು, ತರಕಾರಿ ತರ್ಬೇಕು' ದೀಪೂ ಮುಚ್ಚಿಗೆ ನೋಡುತ್ತ ಹೇಳಿದ.

'ಏನೂ ಬೇಡ. ಮೀನು, ತರಕಾರಿ ಒಂದು ನೆಪ ಪೇಟೆಗೆ ಹೋಗೋದಕ್ಕೆ'.

'ಯಜಮಾನ್ರಿಗೆ ಚಿಕನ್ ಬೇಕು'.

'ಹ್ಞಾಂ ಸರಿ' ಎನ್ನುತ್ತಾ ದುಡ್ಡು ತಂದು, 'ತಗೊ, ಮೀನು, ತರಕಾರಿ ಸ್ವಲ್ಪ ತಂದ್ರೆ ಸಾಕು. ಒಂದು ಕಿಲೊ ಚಿಕನ್, ಒಂದು ಕಿಲೊ ಆ್ಯಪಲ್, ಒಂದರ್ಧ ದ್ರಾಕ್ಷಿ, ಸದ್ಯಕ್ಕೆ ಅಷ್ಟೆ ಸಾಕು' ಎನ್ನುತ್ತ ದುಡ್ಡು ಕೊಟ್ಟು ಒಳಗೆ ನಡೆದಳು.

'ಬರ್ತಾ ಡಾಕ್ಟರ್ ಮನೆಯಿಂದ ಕಳೆದ ವಾರದ ಮ್ಯಾಗಸೀನ್ಸ್ ತಗೊ' ಎಂದು ಕೂಗಿ ಹೇಳಿದಳು. ದೀಪೂ ಹೊರಗೆ ನಡೆದ. ಶೀಲಾ ಕೂಗಿದಳು – 'ದೀಪೂ, ಚೀಲ ತಗೊಂಡ್ಯೇನೊ? ಯಾವ ಲೋಕದಲ್ಲಿದ್ದಿ ನೀನು?'

ದೀಪೂ ಮತ್ತೆ ದುಡುದುಡನೆ ಒಳಗೆ ಬಂದು ಯಾವುದೋ ಪ್ಲಾಸ್ಟಿಕ್ ಚೀಲ ಕೈಗೆತ್ತಿಕೊಂಡ. 'ಮಾರ್ಕೆಟಿಗೆ ಹೋಗುವಾಗ ಯಾವ ಚೀಲ ಎತ್ತಿಕೋತ್ತಾನೆ ನೋಡು. ಸ್ಟ್ಯಾಂಡಿನಲ್ಲಿ ಕೈಹೊಲಿಗೆ ಚೀಲ ಇದೆ, ಅದನ್ನು ತಗೊ'.

ದೀಪೂ ಕ್ಷಣಹೊತ್ತು ಅಲ್ಲೇ ನಿಂತು ಯೋಚಿಸಿ ಪ್ಲಾಸ್ಟಿಕ್ ಚೀಲವನ್ನು ಅಲ್ಲೇ ಬಿಟ್ಟು, ಕೈಹೊಲಿಗೆ ಚೀಲ ತೆಗೆದುಕೊಂಡು ಸೈಕಲ್ ಮೆಟ್ಟಿ ವೀರನಗರಕ್ಕೆ ಹೊರಟ. ಅಂದು ಭಾನುವಾರ. ಪ್ರೊಫೆಸರ್ ಪಾರ್ಟಿಗೆ ಹೋಗುತ್ತಾರೆ, ಹಾಗಾಗಿ ರಾತ್ರಿಗೆ ಚಿಕನ್ ಅನಿವಾರ್ಯವಲ್ಲ ಎಂಬುದು ಆ ಕ್ಷಣಕ್ಕೆ ಇಬ್ಬರಿಗೂ ನೆನಪಾಗಲಿಲ್ಲವೆಂಬುದು ಅವರಿಬ್ಬರ ಮನದ ತಳಮಳಕ್ಕೆ ಸಂಕೇತವಾಗಿತ್ತು. ಅಥವಾ ಮರೆತದ್ದು ಶೀಲಾ ಮಾತ್ರವೆ?

10

ರಾತ್ರಿ ಪ್ಲಾಂಟರ್ ಸೋಮಣ್ಣನವರ ಪಾರ್ಟಿಗೆ ಹಲವು ಗಣ್ಯರನ್ನು ಆಮಂತ್ರಿಸಲಾಗಿತ್ತು. ದೆಹಲಿಯಿಂದೊಬ್ಬರು ವಿಶೇಷ ಅತಿಥಿಯೂ ಬಂದಿದ್ದರು. ವೀರನಗರಕ್ಕೆ ಯಾರೇ ಅತಿಥಿಗಳು ಬಂದರೂ ಪ್ಲಾಂಟರ್ ಸೋಮಣ್ಣನವರ ಗೆಸ್ಟ್ ಹೌಸೇ ಅವರ ತಾಣ. ಅಂಥವರು ಸೋಮಣ್ಣನವರ ಅತಿಥಿಯಾಗುವುದು ಸಹಜವೆ. ಪ್ರೊ. ಭಾಸ್ಕರ್ ಭಗವತಿ ಎಸ್ಟೇಟನ್ನು ಕೊಂಡುಕೊಂಡ ಬಳಿಕವಂತೂ ಪ್ಲಾಂಟರ್ ಸೋಮಣ್ಣನವರಿಗೆ ಅವರು ತುಂಬ ಹತ್ತಿರದವರಾಗಿದ್ದರು. ಆಗಿಂದಾಗ ಸಂಶೋಧನಾ ಕೇಂದ್ರಕ್ಕೆ ಹೋಗಿ 'ಅದು ಹೇಗೆ? ಇದು ಹೇಗೆ?' ಎಂದು ಪ್ರೊ. ಭಾಸ್ಕರ್‌ರಲ್ಲಿ ವಿಚಾರಿಸಿ ತಿಳಿದುಕೊಳ್ಳುತ್ತಿದ್ದರು. ಒಂದೇ ಎಲೆಯಲ್ಲಿ ಮುಳ್ಳುಗಳಂತಹ ಅನೇಕಾನೇಕ ಕಾಫಿ ಮೊಳಕೆಗಳನ್ನು ಕಂಡು ಅಬ್ಬಾ ಎಂದು ಉದ್ಗರಿಸುತ್ತಿದ್ದರು.

ಪ್ರಕೃತಿ ಸೌಂದರ್ಯಕ್ಕೆ ತವರಾಗಿದ್ದ ಭಗವತಿ ಎಸ್ಟೇಟ್ ಸೋಮಣ್ಣನವರಿಗೆ ಬಹಳ ಪ್ರಿಯವಾದುದೇ ಆಗಿತ್ತು. ಆದರೆ ನೋಡಿಕೊಳ್ಳುವವರು ಬೇಕಲ್ಲ. ವೀರನಗರದಲ್ಲಿರುವ ಎಸ್ಟೇಟುಗಳನ್ನು ನೋಡಿಕೊಳ್ಳುವುದಕ್ಕೇ ಸಾಕುಬೇಕಾಗುವಾಗ ಇನ್ನಿದನ್ಯಾರು ಹೊತ್ತುಕೊಂಡು ನಡೀತಾರೆ ಈ ಅಪರ ವಯಸ್ಸಿನಲ್ಲಿ, ಅಂತಿದ್ದಾಗಲೇ ಪ್ಲಾಂಟರ್ ಚಂದ್ರಪ್ಪನವರಿಂದ ಬೇಡಿಕೆ ಬಂದುದು. ಚರ್ಚೆಗೆ ಆಸ್ಪದವಿಲ್ಲದ ಕ್ರಯಕ್ಕೆ ಪ್ಲಾಂಟರ್ ಸೋಮಣ್ಣ ಅದನ್ನು ಕೊಟ್ಟಿದ್ದರು. ಮೇಲಾಗಿ ಭಗವತಿ ಎಸ್ಟೇಟಿನ ಹಿಂದುಗಡೆಯಿದ್ದ 'ಕರಿಮಾಯಿ ಗುಡ್ಡ'ದ ಬಗ್ಗೆ ಅವರಿಗೆ ಇಲ್ಲಸಲ್ಲದ ಸಂದೇಹ. ಒಮ್ಮೊಮ್ಮೆ ಒಬ್ಬೊಬ್ಬರು ಒಂದೊಂದು ವಿಚಾರವನ್ನು 'ಕರಿಮಾಯಿ ಗುಡ್ಡ'ದ ಬಗ್ಗೆ ಹೇಳುತ್ತಿದ್ದರು. ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದರೇ ಹೊರತು ಅದರ ನಿಗೂಢತೆಯನ್ನು ಭೇದಿಸುವುದು ಅವರ ಪಾಲಿನ ಪಾಯಸವಾಗಿರಲಿಲ್ಲ. ಪ್ರೊ. ಭಾಸ್ಕರ್ ಹೇಗಿದ್ದರೂ ವಿಜ್ಞಾನಿ. ಸಸ್ಯಶಾಸ್ತ್ರ ಪರಿಣತರು. ಕರಿಮಾಯಿ ಗುಡ್ಡದ ನಿಗೂಢತೆಯನ್ನು ಅವರೇ ಭೇದಿಸಲಿ ಎಂದುಕೊಂಡರು. ಆದರೂ ಆಗಾಗ ಭಗವತಿ ಎಸ್ಟೇಟಿಗೆ ಹೋಗಿ ಏನು ಹೆಚ್ಚು ಕಡಿಮೆಯಿದ್ದರೂ ಸರಿಪಡಿಸಿಕೊಟ್ಟು ಬರುತ್ತಿದ್ದರು. ಶೀಲಾಳಿಗೂ ಸೋಮಣ್ಣನವರೆಂದರೆ ವಿಶೇಷ ಗೌರವ. ಎಸ್ಟೇಟನ್ನು, ಪುರಾತನ ಬಂಗಲೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆಯೇ ಎಂಬುದಾಗಿ ಅವರು ಪರೀಕ್ಷಿಸಿ ಹೋಗುತ್ತಿದ್ದ ರೀತಿಯೂ ಆಕೆಗೆ ಹಿಡಿಸಿತ್ತು. ಪ್ರೊ. ಭಾಸ್ಕರ್‌ರಂತೆಯೇ ವೀರನಗರದ ಅನೇಕ ಮಹನೀಯರು ಪ್ಲಾಂಟರ್ ಸೋಮಣ್ಣನವರ ಜೊತೆ ಬಹಳ ಸೌಹಾರ್ದಯುತ ಸಂಬಂಧ ಇರಿಸಿಕೊಂಡಿದ್ದರು. ವೀರನಗರಕ್ಕೆ ಯಾರೇ ಹೊಸ ಅತಿಥಿಗಳು ಬರಲಿ, ಪ್ಲಾಂಟರ್ ಸೋಮಣ್ಣನವರ ಆತಿಥ್ಯವನ್ನು ಸ್ವೀಕರಿಸದೆ ಮರಳುವಂತಿರಲಿಲ್ಲ. ಮಂತ್ರಿಗಳಿರಲಿ, ಬುದ್ಧಿಜೀವಿಗಳಿರಲಿ, ವಿಜ್ಞಾನಿಗಳಿರಲಿ, ಪ್ಲಾಂಟರ್ ಸೋಮಣ್ಣನವರ ಅತಿಥಿಗೃಹದಲ್ಲಿ ಸನ್ಮಾನ ಸತ್ಕಾರ ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ನಡೆಯುತ್ತಿತ್ತು. ಒಂದು ಹಸನಾದ ದಿನದಂದು ತಮ್ಮ ಆತ್ಮೀಯರನ್ನೆಲ್ಲ ಸ್ವಾಗತಿಸಿ ಕೂಟ ಏರ್ಪಡಿಸಿ ಸಂತಸಪಡುವುದೆಂದರೆ ಸೋಮಣ್ಣನವರಿಗೆ ಎಲ್ಲಿಲ್ಲದ ಹೆಮ್ಮೆ. ಕೆಲವೊಮ್ಮೆ ವೀರನಗರಕ್ಕೆ ಬಂದ ಅತಿಥಿಗಳನ್ನು ಉಳಿದ ಸ್ನೇಹಿತರಿಗೆ ಪರಿಚಯಿಸುವುದಕ್ಕಾಗಿಯೂ ಕೂಟಗಳನ್ನು ಏರ್ಪಡಿಸುತ್ತಿದ್ದರು.

ಪಾರ್ಟಿ ಪ್ರಾರಂಭವಾಗಿತ್ತು. ದೆಹಲಿಯಿಂದ ಯಾವುದೋ ಕ್ಷೇತ್ರಕಾರ್ಯ ನಿಮಿತ್ತ ಬಂದಿದ್ದ ನಟರಾಜ್ ಪಟ್ಟಣಶೆಟ್ಟಿ ಅಂದಿನ ವಿಶೇಷ ಅತಿಥಿ. ಪ್ಲಾಂಟರ್ ಸೋಮಣ್ಣನವರು ಅವರನ್ನು ಪ್ರೊ. ಭಾಸ್ಕರ್‌ರ ಬಳಿಗೆ ಕರೆದುಕೊಂಡು ಹೋಗಿ, 'ಇವರು ಪ್ರೊ. ಭಾಸ್ಕರ್, ನಮ್ಮ ಪ್ರದೇಶಕ್ಕೆಲ್ಲ ಬಹುದೊಡ್ಡ ವಿಜ್ಞಾನಿ. ಬೈ ದ ಬೈ, ಇವರು ಮಿ. ನಟರಾಜ್ ಪಟ್ಟಣಶೆಟ್ಟಿ. ದೆಹಲಿಯಿಂದ ಬಂದಿದ್ದಾರೆ. ನಮ್ಮ ಗೆಸ್ಟ್ ಹೌಸಿನಲ್ಲೇ ವಾಸ್ತವ್ಯ. ಸಂಶೋಧನೆ, ಕ್ಷೇತ್ರಕಾರ್ಯ ಇತ್ಯಾದಿ ನಿಮಿತ್ತವಾಗಿ ಯಾರಾದರೂ ಬರುತ್ತಲೇ ಇರುತ್ತಾರೆ. ಈ ಬಾರಿ ನಟರಾಜ್ ಪಟ್ಟಣಶೆಟ್ಟರು' ಎಂದು ಪಕಪಕನೆ ಮಾತನಾಡಿದರು. ಅವರ ಮಾತಿನ ವೈಖರಿ ಯಾರಿಗೂ ಹೊಸತಲ್ಲ. ಒಂದು ಕ್ಷಣ ಪ್ರೊ. ಭಾಸ್ಕರ್ ಪಟ್ಟಣಶೆಟ್ಟರ ಮುಖವನ್ನೇ ಗಮನಿಸಿದರು. ಬಳಿಕ ನಗುತ್ತಾ ಹಸ್ತಲಾಘವ ಮಾಡಿದರು.

'ಅಂದ್ರೆ ನೀವೂ ಕನ್ನಡಿಗರೆ!' ಅಂದರು ಪ್ರೊ. ಭಾಸ್ಕರ್.

'ಹೌದು, ಅಂದ್ರೆ ಡೆಲ್ಲಿಗೆ ಹೋಗಿ ಟ್ವೆಂಟಿ ಇಯರ್ಸ್ ಆಯ್ತು. ಕನ್ನಡ ಎಲ್ಲ ಚೌ ಚೌ ಆಗ್ಯಾದ'.

'ಪರ್ವಾಗಿಲ್ಲ. ಚೆನ್ನಾಗಿಯೇ ಮಾತಾಡ್ತೀರ. ಯಾವ ಇಲಾಖೆಯಲ್ಲಿದ್ದೀರಾ?' ಪ್ರೊ. ಭಾಸ್ಕರ್ ಅಷ್ಟು ಮಾತನಾಡುತ್ತಿದ್ದಂತೆಯೆ 'ಸರ್, ಫೋನ್ ಕರೆ ಬಂದಿದೆ' ಎಂಬುದಾಗಿ ಯಾರೋ ಹೇಳಿ ಹೋದರು.

'ಇಲ್ಲಿನ ಲ್ಯಾಂಡ್‌ಲೈನ್‌ಗೆ ಯಾರಪ್ಪಾ ಕರೆ ಮಾಡೋರು? ಎಂದುಕೊಂಡು ಪ್ರೊ. ಭಾಸ್ಕರ್, 'ಎಕ್ಸ್ ಕ್ಯೂಸ್ ಮಿ ಎನ್ನುತ್ತಾ ಫೋನಿನ ಕಡೆ ಧಾವಿಸಿದರು. ಆ ಹೊತ್ತಿಗೆ ಸೋಮಣ್ಣನವರು ಪಟ್ಟಣಶೆಟ್ಟರನ್ನು ಇತರರಿಗೆ ಪರಿಚಯಿಸುತ್ತಾ ಮುಂದೆ ಸಾಗಿದ್ದರು. ಫೋನ್ ಕೈಗೆತ್ತಿಕೊಂಡ ಪ್ರೊ. ಭಾಸ್ಕರರ ಮಾತುಗಳು ಸಂಗೀತದ ಗದ್ದಲದಲ್ಲಿ ಮುಳುಗಿ ಹೋಯಿತು. ವಾಚ್ ನೋಡುತ್ತಾ, ಆಂಗಿಕವಾಗಿ ಏನೋ ನಟಿಸುವುದಷ್ಟೇ ದೂರದಲ್ಲಿ ಕುಳಿತವರಿಗೆ ಕಂಡುಬಂತು. ಫೋನ್ ಕೆಳಗಿಟ್ಟು ಪ್ರೊ. ಭಾಸ್ಕರ್ ಸ್ವಸ್ಥಾನಕ್ಕೆ ಮರಳಿ, ಗರಮ್ಮಾಗಿ ಒಂದು ಸಿಗರೇಟ್ ಹೊತ್ತಿಸಿದರು. ಮನಸ್ಸಿಗೆ ಕಿರಿಕಿರಿ ಅನ್ನಿಸಿದ ಛಾಯೆ ಅವರ ಮುಖದಲ್ಲಿತ್ತು. ಪ್ಲಾಂಟರ್ ಸೋಮಣ್ಣನವರು ಅಲ್ಲಿದ್ದ ಪುಟ್ಟ ಪ್ಲಾಟ್‌ಫಾರ್ಮನಲ್ಲಿ ನಿಂತುಕೊಂಡು, 'ಗೆಳೆಯರೇ,